# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆ ಮತ್ತು ಸವಾಲುಗಳು

**ಯಮುನಾ ನಾಯ್ಕ ಎಂ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಜಗದ್ಗುರು ತೋಂಟದಾರ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಂಡರಗಿ, ಗದಗ.

DOI: https://doi.org/10.5281/zenodo.18700911

## ABSTRACT:

ಈ ಸಂಶೋಧನಾ ಲೇಖನವು ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆ ಮತ್ತು ಸವಾಲುಗಳನ್ನು ಪ್ರಾಚೀನದಿಂದ ಅರ್ವಾಚೀನದ ಕನ್ನಡ ಸಾಹಿತ್ಯದ ಪ್ರಮುಖ ಆಶಯಗಳು ಮತ್ತು ತಾತ್ವಿಕತೆಯೊಂದಿಗೆ ಸಮೀಕರಿಸಿ ಅವಲೋಕಿಸಲಾಗಿದೆ. ಇಂದಿನ ಕಾಲದ ಸಂಘರ್ಷಗಳು ವಚನ ಚಳುವಳಿಯ ಕಾಲದಲ್ಲೂ ಇದ್ದವು. ಸಮ ಸಮಾಜದ ಆಶಯಗಳನ್ನು, ಸರ್ಕಾರದ ಕಾರ್ಯ ವೈಖರಿಯನ್ನು ವಿರೋಧಿಸಿದವರನ್ನು ಎಡಪಂಥೀಯ ಹಣೆಪಟ್ಟಿ ಅಂಟಿಸುವುದು, ಅಧಿಕಾರ, ಪ್ರಭುತ್ವದ ಪರವಾಗಿದ್ದರೆ ಬಲಪಂಥೀಯರೆಂದು ಗುರುತಿಸುವುದು ಇಂದಿನ ಸಮಸ್ಯೆಯಾಗಿದೆ. ಇದರಿಂದ ಬಿಡುಗಡೆ ಕಾಣುವುದು ಸಾಹಿತ್ಯಕ್ಕಿರುವ ಸವಾಲಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಮೊದಲಾದ ಸಾಹಿತ್ಯ ಪರಂಪರೆಗಳು ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಋಣಿಯಾಗಿರುವಂತೆ ಆಧುನಿಕೋತ್ತರ ಕಾಲಘಟ್ಟದ ಸಾಹಿತ್ಯವೂ ಪೂರ್ವ ಸೂರಿಗಳ ಆದರ್ಶಗಳನ್ನು ಪಾಲಿಸಬೇಕಾಗುತ್ತದೆ. ಆದರೆ ಹೊಸ ಯುಗದ ನವ ಸಾಹಿತ್ಯವು ಜನಪರವಾಗುವಿಕೆಯಲ್ಲಿ ಸೋಲುತ್ತಿರುವುದಕ್ಕೆ ಕಾರ್ಯ–ಕಾರಣ ಸಂಬಂಧ ಶೋಧಿಸುವುದು ಈ ಲೇಖನದ ಉದ್ದೇಶದಲ್ಲಿ ಒಂದಾಗಿದೆ. ಇಂದು ಸಾಹಿತ್ಯವನ್ನು ಓದುವ ಸಂಸ್ಕೃತಿ ಕಡಿಮೆಯಾಗುತ್ತಿರುವುದು ಒಂದೆಡೆಯಾದರೆ ಶೋಷಿತ ಸಮುದಾಯದವರ ನೋವು ಯಾತನೆಗಳನ್ನು ಅಭಿವ್ಯಕ್ತಿಸುವ ಕೃತಿಗಳನ್ನು, ದೈವಗಳ ಹೆಸರಿನಲ್ಲಿ ಬಲಿಯಾದವರಿಗಿಂತ ದೈವಗಳ ವೈಭವೀಕರಣದತ್ತ ಒಲವು ತೋರಿಸುವ ಕೃತಿಗಳು ಮುನ್ನೆಲೆಗೆ ಬರುತ್ತಿರುವುದು ಆಧುನಿಕೋತ್ತರ ಕಾಲದಲ್ಲಿ ಸಮಸ್ಯೆಯ ರೂಪದಲ್ಲಿ ಉಳಿದಿವೆ. ಪುರಾಣದ ಅಧ್ಯಾತ್ಮವು ಆಧುನಿಕತೆಯ ಧರ್ಮವಾಗಿ, ಆಧುನಿಕೋತ್ತರ ಕಾಲದಲ್ಲಿ ಧರ್ಮದ ಕೂಸು ಜಾತಿಯ ರೂಪದಲ್ಲಿ ಎಲ್ಲೆಡೆಯೂ ನರ್ತಿಸುತ್ತಿರುವುದು ಈ ಯುಗದ ಸಾಹಿತಿಗಳ ಮುಂದಿನ ಸವಾಲಾಗಿದೆ. ಇದು ಸಾಹಿತ್ಯದಲ್ಲಿ ನಿರೂಪಿತವಾಗಿದ್ದರೂ ಅಂತಹ ಹೊತ್ತಿಗೆಗಳು ಒಂದು ವರ್ಗಕ್ಕೆ ಸಂಬಂಧಿಸಿದ್ದು ಎಂದು ಉದಾಸೀನತೆ ತೋರುತ್ತಿರುವುದು ಒಂದು ಸಮಸ್ಯೆಯಾಗಿದೆ ಎಂಬ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಎಲ್ಲಾ ಕಾಲದಲ್ಲಿಯೂ ಸಮಸ್ಯೆಗಳು ಇದ್ದೇ ಇರುತ್ತವೆ. ಆದರೆ ಸ್ವರೂಪದಲ್ಲಿ ಮಾತ್ರ ಬದಲಾಗಿರುತ್ತವೆ.

## KEYWORDS:

ಎಡಪಂಥೀಯ, ತಾತ್ವಿಕತೆ, ಸಿದ್ಧಾಂತ, ಪರಂಪರೆ, ಸಮಸ್ಯೆ, ಸವಾಲು.

**ಪೀಠಿಕೆ:** ಕನ್ನಡ ಭಾಷೆ ಮತ್ತು ಸಾಹಿತ್ಯವು ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾದ ಸಾಂಸ್ಕೃತಿಕ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಪ್ರಾಚೀನ ಕನ್ನಡ ಸಾಹಿತ್ಯವು ಶಾಸನ ಸಮೇತವಾದ ಐತಿಹಾಸಿಕವಾದ ಹಲವು ಸಂಗತಿಗಳೊಂದಿಗೆ ಮೌಲ್ಯಯುತವಾದ ಸಂದೇಶಗಳ ಆಗರವಾಗಿದೆ. ಕ್ರಿ.ಶ. 5ನೇ ಶತಮಾನದ ಬಾದಾಮಿಯ ಕಪ್ಪೆಅರಭಟ್ಟನ ಶಾಸನದಲ್ಲಿನ 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ' ಎಂಬ ಪದ್ಯದಲ್ಲಿ ಕನ್ನಡದ ಛಂದೋಗಾಯತ್ರಿಯಾದ ತ್ರಿಪದಿಯ ಲಕ್ಷಣ ಕಂಡುಬಂದರೆ, ತಮ್ಮಟಕಲ್ಲು ಶಾಸನದಲ್ಲಿ ಕನ್ನಡದ ಮೊದಲ ಕಾವ್ಯ ಲಕ್ಷಣವುಳ್ಳ ಮಾದರಿಯು ಉಪಲಬ್ಧವಾಗಿದೆ.

ವಿಜಯನಗರ ಕಾಲದ ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿನ 'ಕೆರೆಯನ್ನು ಕಟ್ಟಿಸು, ಬಾವಿಯಂ ಸವೆಸು, ಸಿಲ್ಕಿದ ಅನಾಥರನ್ನು ಬಿಡಿಸು, ಅನಾಥರನ್ನು ಪೊರೆ' ಎಂದು ಹಾಲುಣಿಸುವಾಗ ತನ್ನ ಮಗನ ಕಿವಿಯಲ್ಲಿ ಉಲಿದ ಲಕ್ಷ್ಮೀಧರಾಮಾತ್ಯನ ತಾಯಿಯ ನುಡಿಯು ಕಾಲಾತೀತವಾಗಿ ನಮಿಸುವಂತಹದ್ದು. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ'ಗಳನ್ನು ಉಲ್ಲೇಖಿಸಿದ ಶ್ರೀವಿಜಯನ ಕವಿರಾಜಮಾರ್ಗವು ಕನ್ನಡಿಗರಿಗೆ ಮತ್ತೊಂದು ಅದ್ಭುತವಾಗಿ ಗೋಚರವಾಗದಿರದು. 19 ಕಥೆಗಳ ಕಥಾಗುಚ್ಛವಾದ ವಡ್ಡಾರಾಧನೆಯ ಭಾಷಾ ಪ್ರಯೋಗ, ಭೋಗದಿಂದ ಯೋಗದತ್ತ ಸಾಗುವ ಉಪಸರ್ಗ ಕೇವಲಿಗಳ ಆದರ್ಶ ಬದುಕು ನಮ್ಮ ಕನ್ನಡ ಸಾಹಿತ್ಯದ ಮಗದೊಂದು ವಿಶೇಷವಾಗಿದೆ. 11ನೇ ಶತಮಾನದ ದುರ್ಗಸಿಂಹ ಕವಿಯು ತನ್ನ ಪಂಚತಂತ್ರದಲ್ಲಿ ಪ್ರಾಣಿಗಳ ಪಾತ್ರ ಚಿತ್ರಿಸುತ್ತಾ ಮನುಷ್ಯರ ಕುತಂತ್ರಗಳನ್ನು ಅನಾವರಣಗೊಳಿಸುವ ಅದರ ಮೌಲ್ಯ ಪ್ರಸಾರವು ಅದ್ಭುತವಾಗಿದೆ.

ಪಂಪನ ಮತ್ತು ನಂತರ ಬಂದ ಕವಿಗಳು ಕನ್ನಡ ಸಾರಸ್ವತ ಲೋಕವನ್ನು ವಿಶ್ವಮಾನ್ಯಗೊಳಿಸುವ ಸೃಜನಶೀಲ ಕೃತಿಗಳನ್ನು ರಚಿಸುವ ಮೂಲಕ ಜೈನಕವಿಗಳು ಮಾಡಿದ ಪ್ರಯತ್ನ ಶ್ಲಾಘನೀಯವಾದದ್ದು. ವಚನ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ಕನ್ನಡ ಭಾಷೆಯು ಕೊಟ್ಟ ಅಮೂಲ್ಯವಾದ ಕೊಡುಗೆಯಾಗಿದೆ. ದಾಸರ ಭಕ್ತಿ ಪರಂಪರೆಯು ಮುಂದೆ ಪುರಂದರದಾಸರಿಂದ ಕರ್ನಾಟಕ ಸಂಗೀತವು ಉದಯವಾಗಿ ಕನ್ನಡನಾಡು ಈ ಎಲ್ಲಾ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಮೈಸೂರು ಒಡೆಯರು ಕವಿಪುಂಗವರನ್ನು ಪೋಷಿಸುವ ಉದಾರವಾದಿಗಳಾದ ಕಾರಣ ನವ ಸಾಹಿತ್ಯದ ಸೃಷ್ಟಿಯೊಂದಿಗೆ ಅನೇಕ ಅನುವಾದಿತ ಕೃತಿಗಳು ಕನ್ನಡ ಸಾರಸ್ವತ ಲೋಕದ ಸಂಪತ್ತಾಯಿತು. ನಾಲ್ವಡಿ ಕೃಷ್ಣರಾಜರ ಕೃಪೆಯಿಂದ ಕನ್ನಡ ರಂಗಭೂಮಿಯ ನವ ರಂಗಸಜ್ಜಿಕೆ ನಿರ್ಮಾಣವಾಯಿತು. ನವೋದಯ ಪೂರ್ವದ ಮುದ್ದಣ್ಣ, ಕೆಂಪುನಾರಾಯಣರಂತಹ ಕವಿಗಳು ತಮ್ಮ ಶ್ರೇಷ್ಠ ಗದ್ಯಗಳು ರಾಮಾಶ್ವಮೇಧ, ಮುದ್ರಾಮಂಜೂಷ ಹಾಗೂ ಶ್ರೀಯವರು ಇಂಗ್ಲಿಷ್ ಗೀತೆಗಳ ಮೂಲಕ ಆಧುನಿಕ ಕನ್ನಡ ಸಾಹಿತ್ಯೋದಯಕ್ಕೆ ನಾಂದಿಹಾಡಿದರು.

ಆಧುನಿಕ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ, ಸ್ತ್ರೀ ಸಂವೇದನೆ ಮೊದಲಾದ ಪ್ರಕಾರಗಳಲ್ಲಿ ತನ್ನದೇ ಆದ ತಾತ್ವಿಕತೆಯನ್ನು ಪ್ರಸರಣ ಮಾಡಿದೆ. ಈ ಐದಾರು ಆಧುನಿಕ ಕನ್ನಡ ಸಾಹಿತ್ಯ ಘಟ್ಟಗಳು ಆಯಾ ಕಾಲಮಾನದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪರಂಪರೆಗಳ ಪ್ರೇರಣೆ ಪಡೆದು ಸಮಸಮಾಜಕ್ಕೆ ಅಮೂಲ್ಯವಾದ ತಾತ್ವಿಕ ದರ್ಶನ ನೀಡಿದೆ. ನವೋದಯವು ಪ್ರಕೃತಿಯ ವರ್ಣನೆಯೊಂದಿಗೆ ಆಧ್ಯಾತ್ಮಿಕ ಒಲವು, ಆದರ್ಶ ಬದುಕನ್ನು ಪ್ರತಿಪಾದಿಸುವ ಕಾವ್ಯಗಳನ್ನು ಕೊಡುಗೆಯ ರೂಪದಲ್ಲಿ ನೀಡಿವೆ. ನಂತರದ ಪ್ರಗತಿಶೀಲ ಪಂಥವು ನೀಡಿದ ಸಾಹಿತ್ಯವು 1940ರ ಕಾಲದ ಸಮಾಜದಲ್ಲಿನ ಬಡತನ, ಹಸಿವು, ನಿರುದ್ಯೋಗ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ಸಣ್ಣಕತೆ, ಕಾದಂಬರಿಗಳು ಇಂದಿಗೂ ಜನಮಾನಸದಲ್ಲಿ ನೆಲೆನಿಂತಿವೆ. 1950ರ ಘಟ್ಟದಲ್ಲಿ ವಸ್ತುಸ್ಥಿತಿಯನ್ನು ಆಧರಿಸಿ ಮೂಡಿಬಂದ ನವ್ಯ ಸಾಹಿತ್ಯವು ಮನುಷ್ಯನ ಸಿನಿಕತನ, ಸುಪ್ತಪ್ರಜ್ಞಾವಸ್ಥೆ, ಒಂಟಿತನವನ್ನು ವಾಸ್ತವಿಕ ನೆಲೆಯಲ್ಲಿ ಗುರುತಿಸಿ ಸೃಜಿಸಲಾದ ಕತೆ, ಕಾವ್ಯ, ಕಾದಂಬರಿಗಳು ಇನ್ನೊಂದು ರೀತಿಯ ತಾತ್ವಿಕತೆಯನ್ನು ಪ್ರತಿಪಾದಿಸಿದವು. 1975ರ ಕಾಲಘಟ್ಟದಲ್ಲಿ ನೆಲೆ ನಿಂತ ದಲಿತ-ಬಂಡಾಯ ಚಳುವಳಿಯು ಸಮಾಜದ ಅಸ್ಪೃಶ್ಯ ದಲಿತರ, ಶೋಷಿತರ, ದಮನಿತರ, ಮಹಿಳೆಯರ ಸಮಸ್ಯೆಗಳನ್ನು ಕತೆ ಕಾದಂಬರಿಗಳ ಮೂಲಕ ತಮ್ಮ ಅಸ್ತಿತ್ವವನ್ನು, ಅಸ್ಮಿತೆಯನ್ನು ಖಚಿತಪಡಿಸುವಲ್ಲಿ ಯಶಸ್ಸಿನ ಹಾದಿಯನ್ನು ಕಂಡವು.

ನಂತರದಲ್ಲಿ ಸಾರಾ ಅಬೂಬಕರ್, ಬಾನು ಮುಷ್ತಾಕ್, ಕೆ. ಷರೀಫರಂತಹ ಮೊದಲಾದ ಸೃಜನಶೀಲ ಲೇಖಕಿಯರು ಇಸ್ಲಾಂ ಮತದ ಜಡ ಸಂಪ್ರದಾಯಗಳನ್ನು ಖಾರವಾಗಿ ವಿಡಂಬಿಸಿದರು. ಇವಿಷ್ಟು ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪವಾಗಿವೆ.

**ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆಗಳು**

ಇಲ್ಲಿಯವರೆಗೂ ಚರ್ಚಿಸಿದ್ದು ಆಧುನಿಕ ಕನ್ನಡ ಸಾಹಿತ್ಯದ ಸಂಕ್ಷಿಪ್ತವಾದ ಹೊರ ನೋಟವಾದರೆ, ಆಧುನಿಕೋತ್ತರ ಕನ್ನಡ ಸಾಹಿತ್ಯವನ್ನು ಕುರಿತು ವಿವೇಚಿಸುವುದಾದರೆ ಮೊದಲು ಭಾಷೆ ಮತ್ತು ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಕೆಲವು ಸಾಮಾನ್ಯ ತಿಳುವಳಿಕೆಯ ಅಗತ್ಯ. ಭಾಷೆಯು ನಿತ್ಯ ಚಲನಶೀಲವಾಗಿರುವಂತೆ ಅದರ ಅಂಗವಾದ ಸಾಹಿತ್ಯವು ಕೂಡ ಆಯಾ ಕಾಲಮಾನಕ್ಕೆ ತಕ್ಕಂತೆ ಬದಲಾದ ವಿದ್ಯಮಾನಕ್ಕೆ ಹೊಂದಿಕೊಳ್ಳುವ ಗುಣ ಹೊಂದಿರುತ್ತದೆ. ಹೊಂದಿಕೊಂಡರೆ ಮಾತ್ರ ಅದನ್ನು ಜೀವಪರ ಜನಪರ ಸಾಹಿತ್ಯವೆಂದು ಕರೆಯಲು ಸಾಧ್ಯ. ಅದರಂತೆ ಆಧುನಿಕ ಕನ್ನಡ ಸಾಹಿತ್ಯವು ಆಯಾ ಕಾಲಘಟ್ಟದಿಂದ ಘಟ್ಟಕ್ಕೆ ಪರಿವರ್ತನೆ ಹೊಂದಿದಂತೆ ಆಧುನಿಕೋತ್ತರ ಕಾಲದ ಸಾಹಿತ್ಯದಲ್ಲಿ ಬದಲಾವಣೆಯನ್ನು ಬೆರಳಿಟ್ಟು ಖಚಿತವಾಗಿ ತೋರಿಸುವುದು ಕಷ್ಟಸಾಧ್ಯ. ಏಕೆಂದರೆ ಈ ಆಧುನಿಕೋತ್ತರ ಕಾಲಘಟ್ಟವು ಆರಂಭವಾಗುವುದು ಎಲ್ಲಿಂದ ಮತ್ತು ಯಾರಿಂದ ಎಂಬುದು ಗೊಂದಲಮಯವಾಗಿದೆ. ಕಾರಣ ಈ ಹಿಂದಿನ ಸಾಹಿತ್ಯ ಚರಿತ್ರಕಾರರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗುರುತಿಸಿದ ಸಿದ್ಧಾಂತ ಪ್ರೇರಣೆಗಳು ಧೋರಣೆಗಳು ಆಧುನಿಕೋತ್ತರ ಕಾಲಮಾನದಲ್ಲಿ ಗುರುತಿಸದೇಯಿರುವುದು ಈ ಕಾಲಮಾನದ ಕನ್ನಡ ಸಾಹಿತ್ಯದ ಸಮಸ್ಯೆಯಾಗಿದೆ.

ಆಧುನಿಕ ಕನ್ನಡ ಸಾಹಿತ್ಯವು ಸಹೃದಯನ ಹೃದಯದೊಡನೆ ಸಂವಾದ ಮಾಡಿದಂತೆ ಆಧುನಿಕೋತ್ತರ ಸಾಹಿತ್ಯವು ಜನಮನ್ನಣೆ ಪಡೆಯುವಲ್ಲಿ ಹಿಂದೆ ಬಿದ್ದಿದೆ ಎಂಬ ಅಪವಾದಗಳು ಇದ್ದು ಇದೊಂದು ಮನಸ್ಥಿತಿಯಲ್ಲದೆ ಬೇರೇನೂ ಅಲ್ಲ. ಇತ್ತೀಚಿನ ಬರಹಗಾರರ ಬರಹಗಳು ಸತ್ವಹೀನವೇನಲ್ಲ. ಆದರೂ ಜನರು ಕುವೆಂಪು, ಬೇಂದ್ರೆ, ಭೈರಪ್ಪರಂತಹ ಲೇಖಕರೊಂದಿಗೆ ಹೋಲಿಸಿ ನೋಡುವ ಗೀಳು ಕೂಡ ಇಂದಿನ ಸಾಹಿತ್ಯ ಮತ್ತು ಸಾಹಿತಿಗಳ ಹಿನ್ನಡೆಗೆ ಕಾರಣವಾಗಿವೆ. ಪುಸ್ತಕದ ಮಳಿಗೆಗಳಲ್ಲೂ ಕೂಡ ಮುಖಮೌಲ್ಯವಿರುವ ಲೇಖಕರ ಪುಸ್ತಕಗಳತ್ತ ದೃಷ್ಟಿ ಹಾಯಿಸುವ ಸ್ವಭಾವ ಕೂಡ ವರ್ತಮಾನದ ಸಾಹಿತ್ಯಕ್ಕೆ ಸಮಸ್ಯೆಯಾಗಿ ಕಾಡುತ್ತಿದೆ. ಸಮಸಮಾಜದ ಆಶಯವನ್ನು ಕುರಿತು ಬರೆಯಹೊರಟ ಅನೇಕ ಸಾಹಿತಿಗಳು ಎಡಪಂಥೀಯರು ಎಂಬ ಹಣೆಪಟ್ಟಿ ಕಟ್ಟಿಸಿಕೊಳ್ಳುವ ಸಮಸ್ಯೆ ಒಂದೆಡೆಯಾದರೆ, ಆಡಳಿತ ಯಂತ್ರದ ಪರವಾಗಿದ್ದರೆ, ಸಂಸ್ಕೃತಿಯನ್ನು ವೈಭವೀಕರಿಸಿ ಬರೆದವರನ್ನು ಬಲಪಂಥೀಯರೆಂದು ಕರೆಯುವ ಮನಸ್ಥಿತಿಯು ಇಂದಿನ ಸಾಹಿತಿಯ ಮುಂದಿರುವ ಸಮಸ್ಯೆಯಾಗಿದೆ. ಈ ತೆರನಾದ ವಿದ್ಯಮಾನವನ್ನು ನಿಭಾಯಿಸುವುದು ದೊಡ್ಡ ಸವಾಲು ಕೂಡ ಹೌದು.

ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕನ್ನಡ ಸಾಹಿತ್ಯಕ್ಕೆ ಕೆಲವೊಂದು ಶೈಲಿ, ಮಾರ್ಗಗಳಿದ್ದವು. ಆದರೆ ಪ್ರಚಲಿತ ಸಾಹಿತ್ಯಕ್ಕೆ ಪ್ರತ್ಯೇಕವಾದ ಶೈಲಿ ಛಂದಸ್ಸುಗಳು ಇಲ್ಲದೇ ಇರುವುದು ಸಹ ಸಹೃದಯರನ್ನು ನವ ಸಾಹಿತ್ಯ ಮುಟ್ಟದೇ ಇರುವ ಸಾಧ್ಯತೆಯೂ ಇಂದಿನ ಸಾಹಿತ್ಯಕ್ಕೆ ಸಮಸ್ಯೆಯಾಗಿ ಪರಿಣಮಿಸಿದೆ. ಕುವೆಂಪು ಅವರ ಮಹಾಛಂದಸ್ಸು, ಬೇಂದ್ರೆಯವರ ಅಷ್ಟಷಟ್ಪದಿ ಪ್ರಯೋಗ, ಪುತಿನ ಅಡಿಗರು ವಿನಾಯಕರ ಸರಳರಗಳೆ ಈ ಬಗೆಯಾದ ವೈವಿಧ್ಯತೆಗಳು ಆಧುನಿಕೋತ್ತರ ಸಾಹಿತ್ಯದಲ್ಲಿ ವಿರಳವಾಗಿ ಗೋಚರಿಸುವುದು ಈ ಬಗೆಯಾದ

ಸವಾಲುಗಳು ಇಂದಿನ ಯುವ ಸಾಹಿತಿಗಳ ಮುಂದಿದೆ. ಆಧುನಿಕ ಕನ್ನಡ ಸಾಹಿತ್ಯ ಘಟ್ಟದಲ್ಲಿ ಸಾಹಿತ್ಯವನ್ನು ಸೃಜಿಸಿದ ಬಹುಪಾಲು ಸಾಹಿತಿಗಳು ಇಂದಿಗೂ ಸಾಹಿತ್ಯ ರಚಿಸುತ್ತಿದ್ದರೂ ಕೂಡ ಯುವ ತಲೆಮಾರಿನವರು ಅವರ ಇತ್ತೀಚಿನ ರಚನೆಯನ್ನು ಈ ಹಿಂದಿನ ಕೃತಿಗಳೊಂದಿಗೆ ಹೋಲಿಸಿ ಮೌಲೀಕರಣ ಮಾಡುತ್ತಿರುವುದು ಈ ಕಾಲದ ಸಮಸ್ಯೆಯಾಗಿದೆ. ರಹಮತ್ ತರೀಕೆರೆ, ಮಾಲತಿ ಪಟ್ಟಣಶೆಟ್ಟಿ, ಸತ್ಯಾನಂದ ಪಾತ್ರೋಟ, ಚಂದ್ರಶೇಖರ ಕಂಬಾರ, ಬಾನು ಮುಷ್ತಾಕ್ ಮೊದಲಾದ ಸಾಹಿತಿಗಳ ಈ ಮೇಲಿನ ರೀತಿಯ ಪ್ರತಿಕ್ರಿಯೆ ಬಂದಿರುವುದು ಕೂಡ ಸಮಸ್ಯೆಯಾಗಿ ತಲೆದೋರಿದೆ.

ಆಧುನಿಕ ಕಾಲದ ಸಾಹಿತ್ಯ ಧರ್ಮ ಮತ್ತು ಧರ್ಮ ಅಧುನಿಕೋತ್ತರ ಕಾಲದ ಸಾಹಿತ್ಯ ಧರ್ಮ ಮತ್ತು ಧರ್ಮದ ನಡುವೆ ತುಂಬಾ ವ್ಯತ್ಯಾಸಗಳಿವೆ. ಇಂದಿನ ಕಲ್ಯಾಣ ರಾಜ್ಯವು ಅನೇಕ ಸಂಸ್ಕೃತಿಗಳಿಗಷ್ಟೇ ಅಲ್ಲದೇ ಸಾವಿರಾರು ಉಪ ಸಂಸ್ಕೃತಿಗಳನ್ನು ಒಳಗೊಂಡಿದೆ. ಹೀಗಿರುವಾಗ ಸಾಹಿತಿಯು ಈ ಎಲ್ಲಾ ಸಂಸ್ಕೃತಿಗಳನ್ನು ಅನುಲಕ್ಷಿಸಿ ನೋಡಲೇಬೇಕಾದ ಅನಿವಾರ್ಯತೆ ಇದೆ. ಸಂವಿಧಾನಬದ್ಧ ಕಾನೂನಿನ ಬಲದಿಂದ ನೆಲಮೂಲದ ಕಟ್ಟಕಡೆಯ ಸಮುದಾಯವೂ ಕೂಡ ಇಂದು ಸಮಾಜದ ಮುಖ್ಯವಾಹಿನಿಗೆ ಬರುವ ಮಾರ್ಗದಲ್ಲಿರುವ ಕಾರಣ ಯಾವ ಸಾಹಿತ್ಯದಲ್ಲಿ ತಾವು ಮತ್ತು ತಮ್ಮ ಸಂಸ್ಕೃತಿ ಇಲ್ಲವೋ ಅದನ್ನು ಒಪ್ಪಿಕೊಳ್ಳಲು ಇಚ್ಛಿಸಲಾರರು, ಇದೂ ಆಧುನಿಕೋತ್ತರ ಕಾಲಮಾನದ ಸಮಸ್ಯೆಯಾಗಿದೆ. ಏಕೆಂದರೆ ಇಲ್ಲಿಯವರೆಗೂ ಯಾವುದನ್ನು ಧರ್ಮ, ಆಚಾರ, ಅನಾಚಾರ, ಶ್ರೇಷ್ಠ-ಕನಿಷ್ಠ ಸಂಸ್ಕೃತಿ-ಸಂಸ್ಕಾರಗಳೆಂದು ಹೇಳಿಕೊಡಲಾಗುತ್ತಿತ್ತೋ ಅದನ್ನು ಆಧುನಿಕೋತ್ತರರು ಸಕಾರಣವಿಲ್ಲದೇ ಹಾಗೂ ಕಾರ್ಯಕಾರಣ ಸಂಬಂಧ, ವೈಚಾರಿಕ ತಳಹದಿ ಇಲ್ಲದೆ ಒಪ್ಪಿಕೊಳ್ಳಲಾರರು. ಇದು ಕೂಡ ಕನ್ನಡ ಸಾಹಿತ್ಯದ ಆಧುನಿಕ ಕಾಲದ ಬಹುದೊಡ್ಡ ಸವಾಲಾಗಿದೆ. ಆಹಾರ ಸಂಸ್ಕೃತಿ, ಶ್ರಮ ಸಂಸ್ಕೃತಿ ಮೊದಲಾದವುಗಳನ್ನು ಇಲ್ಲಿ ಉದಾಹರಿಸಬಹುದು. ಹರಿಶ್ಚಂದ್ರ ಕಾವ್ಯದ ಹೊಲತಿಯರ ಪ್ರಸಂಗ, ಕುವೆಂಪುರವರ ಕಾದಂಬರಿಗಳು ಪುನರಾವರ್ತನೆಗೊಳಿಸಿರುವ ಹೊಲೆಯ ಪದಗಳು, ವಿನಾಯಕರ ಭರತವರ್ಷದ ಕಲ್ಪನೆ ಇವುಗಳನ್ನು ಎಲ್ಲಾ ಸಮುದಾಯಗಳು ಒಪ್ಪಲಾರರು. ಇದು ಆಧುನಿಕೋತ್ತರ ಕಾಲದ ಸಾಹಿತ್ಯದ ಸಮಸ್ಯೆಯಾಗಿದೆ.

ನವೋದಯ ಕಾಲಘಟ್ಟದಲ್ಲಿ ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕನ್ನಡದ ಸಣ್ಣಕಥೆ, ಕವಿತೆ, ನಾಟಕ, ಕಾದಂಬರಿಗಳನ್ನು ಅಂದಿನ ಸಹೃದಯರು ಕಾದು ಕುಳಿತು ಓದುತ್ತಿದ್ದರು. ಆದರೆ ಇಂದು ಈ-ರೀಡಿಂಗ್, ಅಂತರ್ಜಾಲದಲ್ಲಿ ಶೋಧದ ಓದು, ಬುಕ್ ಬ್ರಹ್ಮದಂತಹ ಅಂತರ್ಜಾಲ ಆಧಾರಿತ ಪ್ರಚಾರ ಮಾಧ್ಯಮಗಳಿದ್ದರೂ ಕೂಡ ನವ ತಲೆಮಾರಿನ ಸಾಹಿತಿಗಳ ಅಮೂಲ್ಯ ಸೃಜನಶೀಲ ಬರವಣಿಗೆಗಳನ್ನು ಯುವ ಸಮುದಾಯಗಳು ಆಸಕ್ತಿಯಿಂದ ಒಪ್ಪಿಕೊಳ್ಳದಿರುವುದು ಕೂಡ ಸಮಸ್ಯೆಯಾಗಿ ಕಾಡಿದೆ. ಇಲ್ಲಿ ಸಾಹಿತ್ಯ ಬೇಗನೆ ವೇಗವಾಗಿ ಪ್ರಚಾರ ಪಡೆಯುತ್ತಿದ್ದು ಮೊಬೈಲಿನಲ್ಲಿ ಸಂದೇಶವನ್ನು ಓದಿ ಮರೆಯುವ ರೀತಿಯಲ್ಲಿ ಸಾಹಿತ್ಯವನ್ನು ಅನ್ವಯಿಸಿಕೊಳ್ಳುವಿಕೆ ಇದು ಸಹ ಈ ಶತಮಾನದ ಸಮಸ್ಯೆಯಲ್ಲದೇ ಮತ್ತೇನೂ ಅಲ್ಲ. ಸಂಶೋಧಕರು, ಶಿಕ್ಷಕರು, ಕೆಲವೊಂದು ಹವ್ಯಾಸಿ ಓದುಗರನ್ನು ಬಿಟ್ಟರೆ ನಿಸ್ವಾರ್ಥದಿಂದ ಸಾಹಿತ್ಯವನ್ನು ಆಲಿಸುತ್ತಾ ಆಸ್ವಾದಿಸುವ, ಕವಿಯ ಹೃದಯದೊಂದಿಗೆ ಹೃದಯ ಸಂವಾದವನ್ನು ಮಾಡುವ ಸಹೃದಯರ ಕೊರತೆ ಈ ಯುಗದ ಸಮಸ್ಯೆಯಾಗಿದೆ.

**ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸವಾಲುಗಳು**

ವಚನ ಚಳುವಳಿಯು ಕನ್ನಡಿಗರಿಗೆ ನೀಡಿದ ಸಂದೇಶ ಸಾರ್ವಕಾಲಿಕವಾದದ್ದು.

‘ಕಳಬೇಡ ಕೊಲಬೇಡ ಹುಸಿಯ ನುಡಿಯಲೂ ಬೇಡ’ ಈ ರೀತಿಯ ಬಸವಣ್ಣನ ವಚನದ ಸಾಲುಗಳು, ‘ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ’ ಎಂಬ ದಾಸಿಮಯ್ಯನ ಸುಯೋಕ್ತಿಗಳು ಇಂದು ಕೇವಲ ಪುಸ್ತಕದಲ್ಲಿ ಓದಲಿಕ್ಕೆ, ಭಾಷಣದಲ್ಲಿ ಚಪ್ಪಾಳೆ ಗಿಟ್ಟಿಸಿಕೊಳ್ಳುವ ನುಡಿಗಳಾಗಿ ಉಳಿಯುತ್ತಿವೆ. ಇದರೊಳಗಿನ ತಾತ್ವಿಕತೆ ಯುವ ಸಮುದಾಯದ ಮನಸ್ಸು ಅನ್ವಯಿಸಿಕೊಳ್ಳುತ್ತಿಲ್ಲ, ಹಾಗೇನೆ ಇಂದಿನ ಕಲೂಷಿತ ಸಮಾಜವನ್ನು ಸರಿದಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಈ ರೀತಿಯ ಸವಾಲುಗಳು ಇಂದಿನ ಕನ್ನಡ ಸಾಹಿತಿಗಳ ಮುಂದೆ ಬೃಹದಾಕಾರವಾಗಿ ಬೆಳೆದು ನಿಂತಿದೆ.

ದಾಸರ ಭಕ್ತಿಯ ರಸಧಾರೆಗಳು, ಅದರಲ್ಲೂ ಭಕ್ತ ಕನಕದಾಸರ ‘ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ’ ಎಂದು ಕೇಳಿದ ಕೀರ್ತನೆಯ ತಾತ್ವಿಕತೆ ಆಧುನಿಕೋತ್ತರ ಕಾಲದ ಸಹೃದಯರಿಗೆ ಮನವರಿಕೆಯಾಗುವಲ್ಲಿ ವಿಫಲಗೊಳ್ಳುತ್ತಿವೆ. ಕಾರಣ ಇಂದು ಕವಿಯನ್ನು ಗುರುತಿಸುವಾಗ ಆತನ ಧರ್ಮ, ಜಾತಿ, ಲಿಂಗ, ಆತನ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ಹಿನ್ನೆಲೆಯಾಗಿ ಗ್ರಹಿಸುವ ಪರಿಪಾಠ ರೂಢಿಯಾಗಿದೆ. ಇದರಿಂದ ಹೊರಬಂದು ಕಲೆಯನ್ನು ಕಲೆಯಾಗಿ ಉಪಾಸನೆ ಮಾಡುವ ಮನೋಧರ್ಮ ಬೆಳೆಸುವುದು ಈ ಯುಗದ ಸಾಹಿತ್ಯಕ್ಕೊಂದು ಗಂಭೀರವಾದ ಸವಾಲಾಗಿದೆ.

ಆಧುನಿಕ ಮತ್ತು ಆಧುನಿಕಪೂರ್ವ ಕಾಲದ ಸಾಹಿತ್ಯವು ಒಂದು ಆದರ್ಶ ಸಿದ್ಧಾಂತದಿಂದ ಪ್ರತಿಪಾದಿಸಲ್ಪಟ್ಟಿತ್ತು. ಆದರೆ ಇಂದು ನೂರಾರು ಕೃತಿಗಳು ಒಂದು ವರ್ಷದಲ್ಲಿ ಮುದ್ರಣಗೊಂಡರೂ ಅವುಗಳಲ್ಲಿ ಜನಾರ್ಪಣೆಗೊಳ್ಳುವುದು ಅಥವಾ ಸಹೃದಯರಿಗೆ ತಲುಪುವುದು ತುಂಬಾ ವಿರಳ. ಇದಕ್ಕೆ ಕಾರಣವನ್ನು ಕಂಡುಕೊಳ್ಳುವುದೇ ಒಂದು ಸವಾಲಾಗಿದೆ. ಇದಕ್ಕೆ ವಿಮರ್ಶಾವಲಯದ ಸ್ಪಷ್ಟೀಕರಣವೆಂದರೆ ಇಂದಿನ ಸಾಹಿತಿ ಮತ್ತು ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಸೈದ್ಧಾಂತಿಕ ನಿಲುವುಗಳು ಇಲ್ಲ ಎಂಬ ಆಪಾದನೆ ಇದೆ. ಈ ನಿಲುವಿನಿಂದ ಬಿಡುಗಡೆಗೊಂಡು ತಮ್ಮದೇ ಕಾಲದ ಒಂದು ಸಿದ್ಧಾಂತವನ್ನು ನಿರೂಪಿಸುವ ಸವಾಲು ಈ ಕಾಲದ ಸಾಹಿತ್ಯದ ಮೇಲಿದೆ.

ಅಂದು ಕವಿರಾಜಮಾರ್ಗಕಾರ ಹೇಳಿದಂತೆ ‘ಕಾವೇರಿಯಿಂದ ಗೋದಾವರಿಯವರೆಗಿದ್ದ ನಾಡಿದು’ವೇ ಕರ್ನಾಟಕ ಎಂಬ ವಿಶಾಲವಲಯ ಉಳಿದಿಲ್ಲ. ಅದರಂತೆ ‘ಭಾವಿಸಿದ’ ಎಂಬ ವಿಶಾಲ ಮನಸ್ಸಿನ ವಸುಧಾವಲಯದ ಕನ್ನಡ ಜನಪದರು ಉಳಿದಿದ್ದಾರೆಯೇ ಎಂಬುವುದು ಒಂದು ಸವಾಲಾಗಿದೆ. ನಾವು ಕರುನಾಡರು ಎಂದು ಹೆಮ್ಮೆಪಡಲು ಇಂದು ಈ ನಾಡಿನಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಆರು ಕೋಟಿಯಾದರೂ, ಅದರಲ್ಲಿ ಕನ್ನಡವನ್ನೇ ಮಾತೃಭಾಷೆಯನ್ನಾಗಿ ಪರಿಪಾಲಿಸಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಗೌರವ ಇರುವವರ ಸಂಖ್ಯೆ ಎಷ್ಟು ಎಂಬ ಪ್ರಶ್ನೆ ನಮಗೆ ಸವಾಲಾಗಿನೇ ಕಾಣಿಸುತ್ತಿದೆ. ಕನ್ನಡವನ್ನು ಕಲಿಯುವ ಮನಸ್ಸಿನವರೆಷ್ಟು ಎಂಬುದು ಈ ಕಾಲದ ಸಾಹಿತ್ಯಿಕ ಸಮಸ್ಯೆಯಾಗಿದೆ. ನೆರೆರಾಜ್ಯದಿಂದ ವ್ಯಾಪಾರಕ್ಕಾಗಿ ಬಂದವರು ಇಲ್ಲಿ ರಾಜಕೀಯ, ಆರ್ಥಿಕ, ಶೈಕ್ಷಣಿಕವಾಗಿ ಬಲಾಢ್ಯರಾದರೆ ಕನ್ನಡ ಭಾಷೆ ಮತ್ತು ಸಾಹಿತ್ಯ ಪಸರಿಸುವುದು ಹೇಗೆ ಸಾಧ್ಯ ಎಂಬುವುದು ಇತ್ತೀಚಿನ ಸವಾಲಾಗಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಸಮೃದ್ಧಿಗೊಳಿಸಿ ಅದರ ಹಿತಕಾಯುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು

ಭಾಷಾ ಭಾರತಿ, ಕನ್ನಡ ಜಾನಪದ, ಬಯಲಾಟ, ಯಕ್ಷಗಾನ ಅಕಾಡೆಮಿ ಇಂತಹ ಹತ್ತು ಹಲವಾರು ಸರ್ಕಾರಿ ಸಂಘ ಸಂಸ್ಥೆಗಳು ಇವುಗಳ ಪಾತ್ರ ತುಂಬಾ ಹಿರಿದು ಮತ್ತು ಜವಾಬ್ದಾರಿಯುತವಾದದ್ದು. ಇವುಗಳನ್ನು ನಿರ್ವಹಿಸುವವರನ್ನು ಆಯ್ಕೆ ಮಾಡುವಾಗ ಕೆಲವೊಂದು ಸಿದ್ಧಾಂತಗಳ ಹಿನ್ನೆಲೆಯನ್ನು ಹೊಂದಿರುವವರನ್ನು ಆಯಾ ಸರ್ಕಾರ ನೇಮಿಸುವುದರಿಂದ ಸರ್ವರಿಗೂ ಒಪ್ಪಿತವಾಗುವ ನಿಲುವುಗಳು ಇವರಿಂದ ಕಾರ್ಯರೂಪಕ್ಕೆ ಬಾರದಿರುವುದು ಕೂಡ ಆಧುನಿಕೋತ್ತರ ಕಾಲಮಾನದ ಸಾಹಿತ್ಯಿಕ ಸಮಸ್ಯೆಯಾಗಿದೆ. ಇದನ್ನು ನಿರ್ವಹಿಸುವಿಕೆಯು ಕವಿಗೆ ವರ್ತಮಾನದ ಸವಾಲಾಗುತ್ತಿದೆ. ಭಾಷೆ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸಲು ಸಾಹಿತಿಯೊಂದಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳ ಪಾಲುದಾರಿಕೆಯು ಮುಖ್ಯವಾಗುತ್ತದೆ. ಈ ಮೇಲಿನವುಗಳಲ್ಲಿ ಪಕ್ಷಪಾತ, ಸ್ವಹಿತಾಸಕ್ತಿ ಅತಿಯಾದಾಗ ಅದರಿಂದ ಬಿಡುಗಡೆಯಾಗುವುದು ಈ ಕಾಲಮಾನದ ಒಂದು ಸವಾಲಾಗಿದೆ.

**ಉಪಸಂಹಾರ**

ಕನ್ನಡ ಸಾಹಿತ್ಯ ಚರಿತ್ರೆಯು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಭಿನ್ನ ಭಿನ್ನ ನೆಲೆಗಳಲ್ಲಿ ವಿಭಿನ್ನ ತಾತ್ವಿಕತೆಯನ್ನು ಅನಾವರಣಗೊಳಿಸಿದೆ. ಫಲವತ್ತತೆಯನ್ನು ಪಸರಿಸುವ ನದಿಯಂತೆ ಕಾಲಾನುಕ್ರಮದಲ್ಲಿ ಧರ್ಮ, ಜಾತಿ, ವರ್ಗ, ವರ್ಣ, ಸಮುದಾಯದ ನೆಲೆಗಳಲ್ಲಿ ಸಮಾಜವನ್ನು ಚಿತ್ರಿಸುತ್ತಾ, ಆಯಾ ಕಾಲ ದೇಶದ ಕವಿ ಕಾವ್ಯ ಧರ್ಮದ ಹಿನ್ನೆಲೆಯಲ್ಲಿ ಕಲಾತ್ಮಕ ಬದ್ಧತೆಯನ್ನು ತೋರ್ಪಡಿಸುತ್ತಾ ಸಾಗಿಬಂದಿದೆ. ಈ ಪಯಣದಲ್ಲಿ ಬಹುತ್ವದ ಭಾರತ/ಕರ್ನಾಟಕ ಸಂಸ್ಕೃತಿಯ ಕಲಾತ್ಮಕತೆಯನ್ನು ಕೇಂದ್ರೀಕರಿಸುವಲ್ಲಿ ಸಾಮಾಜಿಕ ಬದ್ಧತೆಯ ನ್ಯಾಯವನ್ನು ಒದಗಿಸಿದೆ ಎಂದು ಖಚಿತವಾಗಿ ಹೇಳುವುದು ದುಸ್ಸಾಹಸ ಎನಿಸಬಹುದು.

ಜನಪದ ಸಾಹಿತ್ಯದ ಆದಿಯಾಗಿ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿರುವ ಇಂದಿನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವ ಸಾಹಿತ್ಯ ಬೇಕಾಗಿದೆ. ಯಾವುದೋ ಒಂದು ಸಮುದಾಯದ ವಿರುದ್ಧ ಮತ್ತೊಂದು ಸಮುದಾಯವನ್ನು ಎತ್ತಿಕಟ್ಟುವ ಮನೋಧರ್ಮದ ಕಾವ್ಯಪರಂಪರೆಯು ಸಮಾಜಘಾತಕ ಶಕ್ತಿಯನ್ನು ಪೋಷಿಸುವ ಉಪಕಸಬಿನ ಕಾರ್ಖಾನೆ ಆಗಬಹುದು. ಇತ್ತೀಚಿನ ಸಾಹಿತ್ಯಿಕ ಬೆಳವಣಿಗೆಯ ಆಘಾತಕಾರಿ ಅಂಶಗಳನ್ನು ಸೂಕ್ಷ್ಮಮತಿಗಳಾಗಿ ನೋಡುವುದಾದರೆ ಟಿಪ್ಪು ಸುಲ್ತಾನ್ ಜೀವನವನ್ನು ಕುರಿತು ಹೊರಬಂದ ನಾಟಕಗಳು, ಕೇರಳ ಸ್ಟೋರಿ, ಕಾಶ್ಮೀರ್ ಫೈಲ್ಸ್ ಇಂತಹ ಚಿತ್ರಕಥೆಗಳು ಬಹುತ್ವ ಭಾರತದ ಕನಸಿಗೆ ತಣ್ಣೀರೆರಚುವ ಬೆಳವಣಿಗೆಗಳು. ಚೀನಾದಲ್ಲಿ ಹುಟ್ಟಿದ ಕರೋನ ವೈರಸ್ ಇಡೀ ಜಗತ್ತನ್ನೇ ಆಪೋಶನ ಮಾಡುವತ್ತ ಸಾಗಿಬಂದ ಮೇಲೆಯೂ ಕೂಡ ಮಾನವೀಯತೆಯ ಪಾಠಗಳನ್ನು ಕಲಿಯದ ಮನಸ್ಥಿತಿಯ ಜನರು ನಮ್ಮಲ್ಲಿ ಇನ್ನೂ ಇದ್ದಾರೆ. ದೇಶದ ಯಾವುದೇ ಮೂಲೆಯಲ್ಲಿ ಸಂಭವಿಸಿದ ಕೆಲವು ಅಹಿತಕರ ಘಟನೆಗಳು ಇಡೀ ದೇಶದ ಜನತೆಯಲ್ಲಿ ಭಯದ ವಾತಾವರಣ ನಿರ್ಮಿಸಲು ಸಜ್ಜಾಗುತ್ತಿರುತ್ತವೆ. ಅದರಂತೆ ಜಗದ ಯಾವುದೇ ಭಾಗದಲ್ಲಿ ಮಾನವೀಯತೆಗೆ ಧಕ್ಕೆಯಾದಾಗ ನೋವಿಗೆ ಮಿಡಿಯುವ ಪ್ರಾಣಮಿತ್ರನಂತೆ ನಮ್ಮ ಸಮಕಾಲೀನ ಸಾಹಿತ್ಯ ಸಾಗಬೇಕಾಗಿದೆ.

ನಮ್ಮ ಸಾಹಿತ್ಯ ಮತ್ತು ಸಾಹಿತಿಗಳು ಜಾತ್ಯಾತೀತ ಮನೋಭಾವದಿಂದ ಸಮಾಜವನ್ನು ನೋಡಬೇಕಾಗಿದೆ. ಕಾನೂನಿನ ನೆರವು ಇಲ್ಲದ ಒಂದು ಕಾಲಘಟ್ಟದಲ್ಲಿ ಸಮಾಜದ ಅನೀತಿ, ಅನಾಚಾರ, ಡಾಂಬಿಕತೆಯನ್ನು ಪ್ರಶ್ನಿಸಿದ ಶರಣರ, ದಾಸರ ಆತ್ಮಸ್ಥೈರ್ಯ ಇಂದಿನ

ಯುವಸಾಹಿತಿ, ಸಂಶೋಧಕರಲ್ಲಿ ಬೇರೂರಬೇಕಿದೆ. ಮನುಜಮತ ವಿಶ್ವಪಥದತ್ತ ನಮ್ಮ ಸಾಹಿತ್ಯ ಪರಂಪರೆಯು ಸಾಗಿ ಅದರಲ್ಲಿ ಸಕಲ ಜೀವಾತ್ಮಗಳಿಗೆ ಲೇಸನ್ನು ಬಯಸುವ ಶರಣರ ಸಂದೇಶಗಳು ಮಾರ್ದನಿಗೊಳ್ಳಬೇಕಿದೆ. ನಮ್ಮ ನವಪೀಳಿಗೆಯ ಉದಯೋನ್ಮುಖ ಸಾಹಿತ್ಯವು ದ್ವೇಷದ ಬೇಲಿಗಳ ಮೇಲೆ ಪ್ರೀತಿಯ ಹೂವುಗಳು ಅರಳಿ ಘಮಿಸುವ ಪರಿಯಲ್ಲಿ ಭರತಭೂಮಿಯನ್ನು ಸರ್ವಜನಾಂಗದ ಶಾಂತಿಯತೋಟವಾಗುವ ಮಂತ್ರ ಪಠಿಸಲಿ.

**ಪರಾಮರ್ಶನ ಗ್ರಂಥಗಳು:**


1. ಮುಗಳಿ ರಂ. ಶ್ರೀ., (1953), ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಗೀತಾ ಬುಕ್ ಹೌಸ್.
2. ಚಿದಾನಂದ ಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸಪ್ನ ಬುಕ್ ಹೌಸ್.
3. ಶ್ರೀನಿವಾಸಮೂರ್ತಿ ಎಂ. ಆರ್., (2013), ವಚನ ಧರ್ಮಸಾರ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಶಿವರಾಮಯ್ಯ (ಸಂ), (2018), ಪಂಪ ಭಾರತ (ಸಂಪುಟ 1 ಮತ್ತು 2), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ವಿವಿಧ ಲೇಖಕರು, (1975), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ (10 ಸಂಪುಟಗಳು), ಬೆಂಗಳೂರು: ಸಪ್ನ ಬುಕ್ ಹೌಸ್.
6. ಕೀರ್ತಿನಾಥ ಕುರ್ತುಕೋಟಿ, (2015), ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಧಾರವಾಡ: ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್.
7. ರಾಜಪ್ಪ ದಳವಾಯಿ (ಸಂ), (2018), ಕನ್ನಡ ಸಾಹಿತ್ಯ ಕೋಶ, ಕೋಡಿಹಳ್ಳಿ (ತುಮಕೂರು): ರಾಜಪ್ಪ ದಳವಾಯಿ ತರಬೇತಿ ಕೇಂದ್ರ.
8. ಬರಗೂರು ರಾಮಚಂದ್ರಪ್ಪ (ಸಂ), (2015), ಕನ್ನಡ ಸಾಹಿತ್ಯ ಸಂಗಾತಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
9. ತಿಪ್ಪೇರುದ್ರಸ್ವಾಮಿ ಎಚ್., (1978), ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
10. ವೀರಣ್ಣ ಸಿ., (2011), ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ (ಸಂಪುಟ 1 ಮತ್ತು 2), ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್.
11. ರಂಗನಾಥ ಶರ್ಮಾ ಎನ್. (ಗದ್ಯಾನುವಾದ), (1972), ರಾಘವಾಂಕನ ಹರಿಶ್ಚಂದ್ರ ಚರಿತೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
12. ಚನ್ನಪ್ಪ ಉತ್ತಂಗಿ (ಸಂ), (2022), ಸರ್ವಜ್ಞನ ವಚನಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.